# ಕರ್ನಾಟಕ ಸರ್ಕಾರ

ಸಂಖ್ಯೆ: ಮಮಇ 33 ಮಭಾಬ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 29-03-2019

## ಸುತ್ತೋಲೆ

**ವಿಷಯ :-** ಸರ್ಕಾರಿ ಬಾಲಕಿಯರ ಹಾಗೂ ಬಾಲಕರ ಬಾಲಮಂದಿರಗಳಲ್ಲಿ ಮಕ್ಕಳ ಸುರಕ್ಷತೆ ಬಗ್ಗೆ.

******

ದಿನಾಂಕ:29-03-2019ರ ಪತ್ರಿಕೆಗಳಲ್ಲಿ "ಸಂತ್ರಸ್ಥ ಬಾಲಕಿಯರನ್ನು ವೇಶ್ಯಾವಾಟಿಕೆಗೆ ದೂಡಿದರು" ಎಂಬ ಶೀರ್ಷಿಕೆಯಡಿ ಪ್ರಕಟವಾಗಿರುವ ಮಾಹಿತಿಯು ಚಿಕ್ಕಬಳ್ಳಾಪುರ ಬಾಲಕಿಯರ ಬಾಲಮಂದಿರಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಈ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳ ಮೇಲೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿದೆ. ನಿಯಮಿತ ತಪಾಸಣೆಗಳು ಕಾಲಕಾಲಕ್ಕೆ ಕೈಗೊಳ್ಳದ ಹಿನ್ನೆಲೆಯಲ್ಲಿ ಈ ಘಟನೆ ನಡೆದಿರುವುದು ಕಂಡುಬಂದಿರುತ್ತದೆ.

ಈ ದಿಸೆಯಲ್ಲಿ ಸರ್ಕಾರದ ಎಲ್ಲಾ ಮಕ್ಕಳ ಸಂಸ್ಥೆಗಳಲ್ಲಿ ಈ ರೀತಿಯ ಘಟನೆಗಳು ನಡೆಯದಂತೆ ಕಟ್ಟೆಚ್ಚರ ವಹಿಸಬೇಕಾಗಿದೆ. ಕಾರಣ ಈ ಕೆಳಕಂಡಂತೆ ಕೂಡಲೇ ಕ್ರಮ ಕೈಗೊಳ್ಳುವುದು.

1. ಬಾಲ ನ್ಯಾಯ ಕಾಯ್ದೆ-2015ರಡಿ ಪ್ರತಿ ಜಿಲ್ಲೆಯಲ್ಲಿ ರಚಿತವಾಗಿರುವ ಜಿಲ್ಲಾ ತನಿಖಾ ಸಮಿತಿಯು ಪ್ರತಿ ಸಂಸ್ಥೆಯ ತನಿಖೆಯನ್ನು ದಿನಾಂಕ: 08-04-2019ರ ಅಪರಾಹ್ನ 4.00 ಗಂಟೆಯೊಳಗಾಗಿ ನಡೆಸಿ, ತಪಾಸಣಾ ವರದಿಯನ್ನು ನಮೂನೆ-46ರಲ್ಲಿ ದಾಖಲಿಸಿ, ವಿವರಗಳನ್ನು ಇ-ಮೇಲ್ ಮುಖಾಂತರ ದಿನಾಂಕ: 09.04.2019ರ ಅಪರಾಹ್ನ 4.00 ಗಂಟೆಯೊಳಗಾಗಿ ಸಲ್ಲಿಸುವುದು(icps.kar@gmail.com).
2. ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಮಕ್ಕಳ ಸಂಸ್ಥೆಗಳಿಗೆ ಪ್ರತಿ ವಾರಕ್ಕೊಂದು ಬಾರಿ ಅನುಬಂಧ-1ರಲ್ಲಿರುವಂತೆ ತಪಾಸಣೆ ನಡೆಸಿ, ವರದಿ ಸಲ್ಲಿಸುವುದು.
3. ಹೊರಗುತ್ತಿಗೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಪೂರ್ವಾಪರ ನಡವಳಿಕೆಗಳ ಬಗ್ಗೆ ಈಗಾಗಲೇ ಹೊರಡಿಸಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಕೆಎಸ್‌ಐಸಿಪಿಎಸ್/ಸಾರಾ/ನೋಂ/114/2018-19, ದಿನಾಂಕ: 03.12.2018ರಲ್ಲಿ ನೀಡಿರುವ ಸೂಚನೆಗಳಂತೆ ಪೋಲೀಸ್ ಇಲಾಖೆಯಿಂದ ಕಡ್ಡಾಯವಾಗಿ ಸಂಸ್ಥೆಯ ಮುಖ್ಯಸ್ಥರು ವರದಿ ಪಡೆದುಕೊಳ್ಳುವುದು.
4. ಸಂಸ್ಥೆಯ ಅಧೀಕ್ಷಕರು/ಸಮಾಲೋಚಕರು ಮಕ್ಕಳೊಂದಿಗೆ ಕಾಲಕಾಲಕ್ಕೆ ಆಪ್ತ ಸಮಾಲೋಚಿಸಿ ಅವರುಗಳ ಮೇಲೆ ಯಾವುದೇ ರೀತಿಯ ದೈಹಿಕ/ಮಾನಸಿಕ/ಲೈಂಗಿಕ ಕಿರುಕುಳವಾಗದೆ ಇರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು. ಇದಕ್ಕಾಗಿ ಪ್ರತ್ಯೇಕ ವಹಿಯನ್ನು ನಿರ್ವಹಿಸುವುದು ಹಾಗೂ ವರದಿಯನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ನಿಯತವಾಗಿ ಸಲ್ಲಿಸುವುದು ಹಾಗೂ ಪ್ರತಿಯನ್ನು ಪ್ರತಿ ತಿಂಗಳು 10ನೇ ತಾರೀಖಿನೊಳಗಾಗಿ ಇ-ಮೇಲ್ (icpssarkar@gmail.com) ವಿಳಾಸಕ್ಕೆ ಸಲ್ಲಿಸುವುದು.
5. ಬಾಲಮಂದಿರಗಳಲ್ಲಿ ಅನುಬಂಧ-2ರಲ್ಲಿ ತೋರಿಸಿರುವಂತೆ ರಾತ್ರಿ ವೇಳೆ ಸರದಿಯ ಮೇಲೆ (Rotation Basis) ಬಾಲಕಿಯರ ಸರ್ಕಾರಿ ಬಾಲಮಂದಿರಗಳಲ್ಲಿ ವಾಸ್ತವ್ಯ ಹೂಡಿ ಮಕ್ಕಳ ಯೋಗಕ್ಷೇಮ ಗಮನಿಸುವುದು. ಈ ಕುರಿತು ಸಂಸ್ಥೆಯಲ್ಲಿ ವೇಳಾಪಟ್ಟಿಯನ್ನು ನಿರ್ವಹಿಸಿ ಪ್ರದರ್ಶಿಸುವುದು.

6. ಬಾಲ ಮಂದಿರಗಳ ಅಧೀಕ್ಷಕರು ಬಾಲಮಂದಿರಗಳ ಮಕ್ಕಳು ಕಾಣೆಯಾದ/ಓಡಿಹೋದ ಪ್ರಕರಣಗಳು ಗಮನಕ್ಕೆ ಬಂದಾಗ 24 ಗಂಟೆಯೊಳಗಾಗಿ ಎಫ್.ಐ.ಆರ್ ದಾಖಲಿಸುವುದು. ಸಂಬಂಧಪಟ್ಟ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು/ ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ನಿರ್ದೇಶನಾಲಯಕ್ಕೆ ಎಫ್. ಐ. ಅರ್ ಪ್ರತಿಯೊಂದಿಗೆ ತಪ್ಪದೇ ವರದಿ ಮಾಡುವುದು. (icpssarkar@gmail.com)
7. ಮೊದಲ ಹಂತದಲ್ಲಿ ಜಿಲ್ಲಾ ನೋಡಲ್ ಅಧಿಕಾರಿಗಳು ತಮಗೆ ನಿಗಧಿಪಡಿಸಿದ ಜಿಲ್ಲೆಗಳಿಗೆ ಭೇಟಿ ನೀಡಿ, ಬಾಲಕಿಯರ ಬಾಲಮಂದಿರದ ಮಕ್ಕಳೊಂದಿಗೆ ಸಮಾಲೋಚಿಸಿ ಅವರ ಸುರಕ್ಷತೆಯ ಬಗ್ಗೆ ಪರಿಶೀಲಿಸಿ ಖಾತ್ರಿ ಪಡಿಸಿಕೊಂಡು ವರದಿಯನ್ನು ನಿರ್ದೇಶನಾಲಯಕ್ಕೆ ದಿನಾಂಕ:15.04.2019ರ ಪೂರ್ವಾಹ್ನ 11.00 ಗಂಟೆಯೊಳಗೆ ಇ-ಮೇಲ್ (icpssarkar@gmail.com) ವಿಳಾಸಕ್ಕೆ ಸಲ್ಲಿಸುವುದು.
8. ಬಾಲಮಮಂದಿಗಳ ಮಕ್ಕಳ ಸುರಕ್ಷತೆಗಾಗಿ ಸೂಕ್ತ ವ್ಯವಸ್ಥೆ ನಿರ್ವಹಿಸಿರುವ ಬಗ್ಗೆ ಅನುಬಂಧ-3ರಲ್ಲಿರುವ ಚೆಕ್‌ಲಿಸ್ಟ್‌ನಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ವರದಿಯನ್ನು ನಿರ್ದೇಶನಾಲಯಕ್ಕೆ ದಿನಾಂಕ:15.04.2019ರ ಪೂರ್ವಾಹ್ನ 11.00 ಗಂಟೆಯೊಳಗೆ ಇ-ಮೇಲ್ (icpssarkar@gmail.com) ವಿಳಾಸಕ್ಕೆ ಸಲ್ಲಿಸುವುದು.

21/03/2019

**(ಚಕ್ರವರ್ತಿ ಮೋಹನ್)**
ಸರ್ಕಾರದ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

<u>ಇವರಿಗೆ:</u>

1) ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ಯೋಜನೆ, ಬೆಂಗಳೂರು.
2) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಬೆಂಗಳೂರು.
3) ಜಿಲ್ಲಾಧಿಕಾರಿಗಳು/ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು/ ಜಿಲ್ಲಾ ಪೋಲೀಸ್ ಅಧೀಕ್ಷಕರುಗಳು
4) ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳು.
5) ಎಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
6) ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಸಮಗ್ರ ಮಕ್ಕಳ ರಕ್ಷಣಾ ಯೋಜನೆ
7) ಅಧ್ಯಕ್ಷರು, ಮಕ್ಕಳ ಕಲ್ಯಾಣ ಸಮಿತಿಗಳು, (ಎಲ್ಲಾ ಜಿಲ್ಲೆಗಳು)
8) ಅಧೀಕ್ಷಕರುಗಳು, ಸರ್ಕಾರಿ ಬಾಲಕಿಯರ ಬಾಲಮಂದಿರಗಳು, ಬಾಲಕರ ಬಾಲ ಮಂದಿರಗಳು, ವೀಕ್ಷಣಾಲಯಗಳು/ ಬುದ್ಧಿ ಮಾಂದ್ಯ ಮಕ್ಕಳ ಬಾಲ ಮಂದಿರಗಳು.

<u>ಪ್ರತಿಯನ್ನು ಮಾಹಿತಿಗಾಗಿ:</u>

1) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಇವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4) ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.

5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಒಳಾಡಳಿತ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
6) ಮಾನ್ಯ ಮಾಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ.

**ಸುತ್ತೋಲೆ ಸಂಖ್ಯೆ ಮಮಇ 33 ಮಭಾಬ 2019, ದಿನಾಂಕ:29.03.2019ಕ್ಕೆ**

**ಅನುಬಂಧ–1**

| | |
|---|---|
| ಸೋಮವಾರ | ಮಕ್ಕಳ ಕಲ್ಯಾಣ ಸಮಿತಿ |
| ಮಂಗಳವಾರ | ಉಪ ನಿರ್ದೇಶಕರು |
| ಬುಧವಾರ | ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು |
| ಗುರುವಾರ | ಮಹಿಳಾ ಮತ್ತು ಮಕ್ಕಳ ಕಲ್ಯಾಣಧಿಕಾರಿ |
| ಶುಕ್ರವಾರ | ಜಿಲ್ಲಾ ತನಿಖಾ ಸಮಿತಿ |
| ಶನಿವಾರ | ಸಂಸ್ಥೆಯ ನೋಡಲ್ ಅಧಿಕಾರಿ |
| ಭಾನುವಾರ | ವ್ಯವಸ್ಥಾಪಕ ಸಮಿತಿ |

**ಅನುಬಂಧ 2**

| | |
|---|---|
| ಸೋಮವಾರ | ಅಧೀಕ್ಷಕರು |
| ಮಂಗಳವಾರ | ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು |
| ಬುಧವಾರ | ಸಮಾಜ ವಿಷಯ ಪರಿವೀಕ್ಷಕರು/ ಪರಿವೀಕ್ಷಣಾಧಿಕಾರಿಗಳು |
| ಗುರುವಾರ | ಸಂಸ್ಥೆಯ ಸಮಾಲೋಚಕರು |
| ಶುಕ್ರವಾರ | ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಮಾಲೋಚಕರು |
| ಶನಿವಾರ | ಗೃಹಮಾತೆ |
| ಭಾನುವಾರ | ವ್ಯವಸ್ಥಾಪನಾ ಸಮಿತಿಯ ಸದಸ್ಯರು. |

<u>ವಿ.ಸೂ.</u> ಸರ್ಕಾರಿ ಬಾಲಕಿಯರ ಬಾಲಮಂದಿರಗಳಲ್ಲಿ ಖಡ್ಡಾಯವಾಗಿ ಮಹಿಳಾ ಅಧಿಕಾರಿ/ ಸಿಬ್ಬಂದಿಗಳನ್ನು ನಿಯೋಜಿಸುವುದು.

ಸುತ್ತೋಲೆ ಸಂಖ್ಯೆ ಮಮಇ 33 ಮಭಾಬ 2019, ದಿನಾಂಕ:29.03.2019ಕ್ಕೆ

## ಅನುಬಂಧ-3

ಸಂಸ್ಥೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಜೆ.ಜೆ. ನಮೂನೆ 46ರ ಜೊತೆಗೆ ಈ ತಡೆಪಟ್ಟಿಯಲ್ಲಿ ಮಾಹಿತಿ ನೀಡುವುದು.

ಭೇಟಿ ನೀಡಿದ ಅಧಿಕಾರಿ ಹೆಸರು:

ಸಂಸ್ಥೆಯ ಹೆಸರು ಮತ್ತು ಜಿಲ್ಲೆ :

ಭೇಟಿ ನೀಡಿದ ದಿನಾಂಕ :

| ಕ್ರ.ಸಂ | ವಿಷಯ |
|---|---|
| 1 | ಭೇಟಿ ನೀಡಿದ ಸಂದರ್ಭದಲ್ಲಿ ಮಕ್ಕಳನ್ನು ಮಾತನಾಡಿಸಲಾಗಿದೆಯೇ; |
| 2 | ಹೌದಾದಲ್ಲಿ ಮಕ್ಕಳ ಮೇಲೆ ಯಾವುದೇ ರೀತಿಯ ಶಾರೀರಿಕ ಲೈಂಗಿಕ/ಮಾನಸಿಕ ಕಿರುಕುಳದ ಬಗ್ಗೆ ತಿಳಿಸಿರುತ್ತಾರೆಯೇ; |
| 3 | ರಾತ್ರಿ ಪಾಳೆಯಲ್ಲಿ ಕಾರ್ಯ ನಿರ್ವಹಿಸಲು ಅಧೀಕ್ಷಕರು ಮತ್ತು ಸಿಬ್ಬಂಧಿಗಳನ್ನು ಒಳಗೊಂಡಂತೆ ವೇಳಾಪಟ್ಟಿ ಸಿದ್ದಪಡಿಸಲಾಗಿದೆಯೇ; |
| 4 | ವೇಳಾಪಟ್ಟಿಯನ್ವಯ ಕಾರ್ಯನಿರ್ವಹಿಸಲಾಗುತ್ತಿದೆಯೇ; |
| 5 | ಸಂಸ್ಥೆಯಲ್ಲಿ ಸಲಹಾ ಪೆಟ್ಟಗೆ ಇಡಲಾಗಿದೆಯೇ; |
| 6 | ಸಲಹಾ ಪೆಟ್ಟಿಗೆಯಲ್ಲಿ ಸಲಹೆ/ದೂರುಗಳು ಬಂದಿರುವ ಬಗ್ಗೆ ವ್ಯವಸ್ಥಾಪಕ ಸಮಿತಿ ಸಭೆಯಲ್ಲಿ ಪರಿಶೀಲಿಸಲಾಗಿದೆಯೇ; ವಿವರಗಳನ್ನು ನೀಡುವುದು; |
| 7 | ವ್ಯವಸ್ಥಾಪಕ ಸಭೆಯ ನಡಾವಳಿಗಳನ್ನು ದಾಖಲಿಸಿದ್ದಲ್ಲಿ, ಪ್ರತಿ ಲಗತ್ತಿಸುವುದು; |

| | |
|---|---|
| 8 | ವ್ಯವಸ್ಥಾಪಕ ಸಮಿತಿ ಸಭೆಯ ನಡಾವಳಿಯ ಅನ್ವಯ ಕ್ರಮ ಕೈಗೊಳ್ಳಲಾಗಿದೆಯೇ; |
| 9 | ಮಕ್ಕಳಿಗೆ ತೊಂದರೆಯಾದ ಸಂದರ್ಭದಲ್ಲಿ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ 1098, ಪೋಲೀಸ್, ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ದೂರವಾಣಿ ಸಂಖ್ಯೆಗಳನ್ನು ಪ್ರದರ್ಶಿಸಲಾಗಿದೆಯೇ; |
| 10 | ಸಂಸ್ಥೆಯಲ್ಲಿನ ಮಕ್ಕಳು ಕಾಣೆಯಾದ ಸಂದರ್ಭಲ್ಲಿ FIR ದಾಖಲಿಸಲಾಗಿದೆಯೇ; |
| 11 | ಮಕ್ಕಳು ಕಾಣೆಯಾದ ಬಗ್ಗೆ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಲಾಗಿದೆಯೇ; |
| 12 | ಸಂಸ್ಥೆಯಲ್ಲಿ ಹೊರಗುತ್ತಿಗೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳ ಪೋಲೀಸರಿಂದ ಪರಿಶೀಲನೆ ವರದಿ (Police Verification) ಪಡೆಯಲಾಗಿದೆಯೇ; |

ಭೇಟಿ ನೀಡಿದ ಅಧಿಕಾರಿಯ ಸಹಿ/
ಪದನಾಮ